ವರೆಯು ಶೇ. ೨೫ಕ್ಕಿಂತ ಕಡಿಮೆಯಿಲ್ಲದೇ ಶೇ. ೩೭ ಇದ್ದಲ್ಲಿ ೬ ಎಲ್ರಂತ್ಯದ ಭೂ ಕಂದಾಯದ ಪೂರ್ಣ ಭಾಗವನ್ನು ಇಳುವರಿಯು ಶೇ. ೩೭ಕ್ಕಿಂತ ಹೆಚ್ಚಿದ್ದು ಶೇ. ೫೦ ರಷ್ಟನ್ನು ಮೀರದಿದ್ದಲ್ಲಿ ಭೂ ಕಂದಾಯದ ಅರ್ಧ ಭಾಗವನ್ನು ೧೬೭ (ಎ) ನಿಯಮಾನುಸಾರ ಸ್ಥಗಿತಗೊಳಿಸಲಾಗುವುದು. ಈ ಅಧಿಕಾರವು ಜಿಲ್ಲಾಧಿಕಾರಿಗಳ ವ್ಯಾಪ್ತಿಯೊಳಗೇ ಬರುವುದಂ.

ಮಾನ್ಯ ಸದಸ್ಯರು ಸೂಚಿಸಿರುವಂತೆ ೧೯೮೭–೮೮ನೇ ಸಾಲಿನಲ್ಲಿ ಶಿಕಾರಿಪುರದ ೧೫೦ಕ್ಕೂ ಹೆಚ್ಚು ಗ್ರಾಮಗಳಲ್ಲಿ ಬರಗಾಲವಿದ್ದು ಬೆಳೆಗಳ ಇಳುವರಿಯು ಶೇ. ೨೫ಕ್ಕಿಂತ ಕಡಿಮೆ ಇದ್ದರೂ ಈ ಬಗ್ಗೆ ಸರ್ಕಾರಕ್ಕೆ ವರದಿ ಕಳುಹಿಸಿದ್ದರೂ ಭೂ ಕಂದಾಯ ಮತ್ತು ನೀರು ತೆರಿಗೆಗಳನ್ನು ಕಟ್ಟುನಿಟ್ಟಾಗಿ ವಸೂಲಿ ಮಾಡುವಂತೆ ಸರ್ಕಾರವು ಆದೇಶ ಹೊರಡಿಸಿದ್ದು ಇದರಿಂದ ರೈತರಿಗೆ ತೊಂದರೆಯಾಗಿರುವುದಾಗಿ ಆದ್ದರಿಂದ ಈ ತೆರಿಗೆಗಳನ್ನು ವಸೂಲಿ ಮಾಡದಂತೆ ಆದೇಶವನ್ನು ನೀಡಲು ಕೋರಿದ್ದಾರೆ.

ಮಾನ್ಯ ಸದಸ್ಯರ ಈ ಮನವಿಯನ್ನು ಪರಿಶೀಲಿಸಲಾಗಿದೆ. ಸರ್ಕಾರವು ಕೀರ್ಮಾನಿಸಿದಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೂ ಭೂ ಕಂದಾಯ ಮತ್ತು ನೀರ ಕರಗಳನ್ನು ಕಟ್ಟುನಿಟ್ಟಾಗಿ ವಸೂಲಿ ಮಾಡುವಂತೆ ನಿಖರವಾದ ಸೂಚನೆಗಳನ್ನು ನೀಡಿಯಾಗಿದೆ, ಆದರೂ ಯಾವ ಯಾವ ಹಳ್ಳಿಗಳನ್ನು ''ಅತಿ ತೀವ್ರ'' ಬರಗಾಲ ಪೀಡಿತವೆಂದು (ಪೋಸ್ಟ್ ಆಕ್ಯೂಟ್) ಗುರ್ತಿಸಲ್ಪಡಲಾಗಿದೆಯೋ (ಅಂದರೆ ಶೇ. ೨೫ಕ್ಕಿಂತ ಕಡಿಮೆ ಬೆಳೆ ಆಗಿರುವ ಹಳ್ಳಿಗಳಲ್ಲಿ) ಅಲ್ಲಿ ಭೂ ಕಂದಾಯವನ್ನು ಜಿಲ್ಲಾಧಿಕಾರಿಗಳು ವಸೂಲಿ ಮಾಡುವಂತಿಲ್ಲ. ಅಂತೆಯೇ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನಲ್ಲಿ ಯಾವ ಯಾವ ಹಳ್ಳಿಗಳಲ್ಲಿ ಶೇ. ೨೫ಕ್ಕಿಂತ ಕಡಿಮೆ ಬೆಳೆ ಆಗಿರುವ ಕಡೆಗಳಲ್ಲಿ ಜಿಲ್ಲಾಧಿಕಾರಿಗಳು ಭೂ ಕಂದಾಯವನ್ನು ವಸೂಲಿ ಮಾಡುವಂತಿಲ್ಲ. ಉಳಿದೆಲ್ಲ ಭಾಗಗಳಲ್ಲೂ ಸರ್ಕಾರಿ ಬಾಕಿಗಳನ್ನು ಕಟ್ಟುನಿಟ್ಟಾಗಿ ವಸೂಲಿ ಮಾಡುವಂತೆ ಸೂಚಿಸಿದ್ದು ಇದನ್ನು ಎಲ್ಲಾ ಜಿಲ್ಲಾಧಿಕಾರಿಗಳು ನಿವಿರವಾಗಿ ಪಾಲಿಸುತ್ತಿದ್ದಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಎಲ್ಲಿ ಶೇಕಡ ೨೫ಕ್ಕಿಂತ ಕಡಿಮೆ ಬೆಳೆ ಬರುತ್ತದೆ ಅಲ್ಲಿ ಕಂದಾಯ ವಸೂಲು ಮಾಡುವುದನ್ನು ನಿಲ್ಲಿಸಬೇಕೆಂದು ಈಗಾಗಲೇ ಹೇಳಿದ್ದೇನೆ. ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ಈ ವರ್ಷದ ವಸೂಲಾತಿ ಇನ್ನೂ ಪ್ರಾರಂಭವಾಗಿಲ್ಲ. ಅಧಿಕಾರಿಗಳು ವಸೂಲು ಮಾಡತಕ್ಕಂಥಾದ್ದು ಹಿಂದಿನ ಬಾಕಿಯನ್ನು ಎಲ್ಲಿ ಸಂಪೂರ್ಣವಾಗಿ ಬೆಳೆ ಬಂದಿಲ್ಲವೋ ಅಂತಹ ಹಳ್ಳಿಗಳಲ್ಲಿ ವಸೂಲು ಮಾಡುವುದನ್ನು ನಿಲ್ಲಿಸುವುದಕ್ಕೆ ಸೂಚನೆ ಕೊಟ್ಟಿದ್ದೇನೆ.

ಅಧ್ಯಕ್ಷರು.—ಶ್ರೀ ಶಿವಾನಂದ ಕೌಜಲಗಿ

ಶ್ರೀ ಗೋಪಾಲ ಮುಕುಂದ ಕಾವಡೆ

ಶ್ರೀ ಎಂ. ಎಸ್. ಪಾಟೀಲ್

ಶ್ರೀ (ಮಾನ್ಯ ಸದಸ್ಯರು ಗೈರು ಹಾಜರಿ)

೨. ಕರ್ನಾಟಕದಾದ್ಯಂತ ರೇಷ್ಮೆ ಬೆಳೆಗೆ ರೋಗರಹಿತ ಬೀಜವನ್ನು ಸರಬರಾಜು ಮಾಡುವುದು.

ಶ್ರೀ ಆರ್. ವೆಂಕಟರಾಮಯ್ಯ.—ಮಾನ್ಯ ಅಧ್ಯಕ್ಷರೇ, ಕರ್ನಾಟಕದಾದ್ಯಂತ ರೇಷ್ಮೆ ಬೆಳೆಯಲ್ಲಿ ರೋಗರಹಿತ ಮಿಶ್ರತಳಿ ಬೀಜದ ಸರಬರಾಜಾಗದೆ ಶೇಕಡ ೨೫ರಷ್ಟು ಬೆಳೆ ರೈತರ ಕೈಗೆ ಸಿಕ್ಕುತ್ತಿಲ್ಲ. ಸೀಡ್ ಏರಿಯಾದಲ್ಲಿ ಸರಿಯಾದ ನಿಯಂತ್ರಣವಿಲ್ಲದೆ ಭ್ರಷ್ಟ ಅಧಿಕಾರಿಗಳು ಮಿಶ್ರತಳಿಯ ಗೂಡುಗಳನ್ನು ತಯಾರಿಸುವಲ್ಲಿ ಸರಿಯಾಗಿ ಕಂಟ್ರೋಲ್ ಮಾಡದೇ ಈ ಒಂದು ಅನ್ಯಾಯ ಪರಿಸ್ಥಿತಿ ವಿರ್ಮಾಣಕ್ಕೆ ಅನುಕೂಲವಾಗಿ ರೈತರಿಗೆ ತುಂಬಾ ತೊಂದರೆಯಾಗಿದೆ ರೇಷ್ಮೆ ಬೆಳೆಗೆ ಒಳ್ಳೆಯ ಬೆಲೆ ಬರುವ ಈ ಕಾಲದಲ್ಲಿ ಡಿಸೀಸ ಫ್ರೀ ಮಿಶ್ರತಳಿ ಸಿಗದೆ ಈ ಒಂದು ಅನುಕೂಲ ರೈತರಿಗೆ ಸಿಗುತ್ತಿಲ್ಲ. ಸರ್ಕಾರದವರು ಈಗಲಾದರೂ ಸೀಡ್ ಏರಿಯಾದಲ್ಲಿ ಸರಿಯಾದ ನಿಯಂತ್ರಣ ಮಾಡಿ ರೈತರಿಗೆ ಸರಿಯಾದ ರೋಗರಹಿತ ಮಿಶ್ರತಳಿ ಬೀಜ ಕೊಡುವಂತ ವಿರ್ಪಾಡು ಮಾಡಬೇಕೆಂದು, ರೈತರ ನೆರವಿಗೆ ಬರಬೇಕೆಂದು ಈ ಮೂಲಕ ಮಾನ್ಯ ರೇಷ್ಮೆ ಇಲಾಖೆಯ ಮಂತ್ರಿಗಳ ಹೇಳಿಕೆಯನ್ನು ಕೇಳಬಯಸುತ್ತೇನೆ.

ಶ್ರೀ ಕೆ.ಎಂ. ಮುನಿಯಪ್ಪ (ರೇಷ್ಮೆ ಸಚಿವರು).—

ಕರ್ನಾಟಕ ರಾಜ್ಯದಲ್ಲಿ ರೇಷ್ಮೆ ಬೆಳೆಯಂ ಸುಮಾರು ೧.೪೦.೦೦೦ ಹೆಕ್ಟೇರುಗಳಲ್ಲಿ ಬೆಳೆಯುತ್ತಿದ್ದು ಇದಕ್ಕೆ ಬೇಕಾದ ರೇಷ್ಮೆ ಮೊಟ್ಟೆಗಳ ಬೇಡಿಕೆ ವರ್ಷವೊಂದಕ್ಕೆ ಸುಮಾರು ೧೭ ಕೋಟಿ. ಈ ರೀತಿಯ ಮೊಟ್ಟೆಗಳ ಬೇಡಿಕೆಯನ್ನು ೭೮ ರಾಜ್ಯ ಸರ್ಕಾರಿ ಬಿತ್ತನೆ ಕೋಠಿಗಳು ೮ ಕೇಂದ್ರ ರೇಷ್ಮೆ ಮಂಡಳಿಯ ಬಿತ್ತನೆ ಕೋಠಿಗಳು ಹಾಗೂ ೬೩೨ ಖಾಸಗಿ ಬಿತ್ತನೆ ಕೋಠಿಗಳು ತಯಾರಿಸಿ ವಿತರಣೆ ಮಾಡುತ್ತಿವೆ. ಸರ್ಕಾರಿ ರೇಷ್ಮೆ ಬಿತ್ತನೆ ಕೋಠಿಗಳು ಸುಮಾರು ಶೇಕಡ ೫೦ ರಷ್ಟು ಬೇಡಿಕೆಯನ್ನು ಪೂರೈಸುತ್ತಿದ್ದರೆ ಉಳಿದ ೫೦ ಭಾಗವನ್ನು ಖಾಸಗಿಯವರು ಪೂರೈಸುತ್ತಿದ್ದಾರೆ. ಪ್ರಸ್ತುತ ಸಾಲಿನಲ್ಲಿ ಡಿಸೆಂಬರ್ ಅಂತ್ಯದ ವರೆಗೆ ಈ ಬಿತ್ತನೆ ಕೋಠಿಗಳಲ್ಲಿ ೧೫೫ ಕೋಟಿಗಳಷ್ಟು ರೇಷ್ಮೆ ಮೊಟ್ಟೆ ತಯಾರಾಗಿ ವಿತರಣೆ ಆಗಿದೆ ಅಂದರೆ ರೇಷ್ಮೆ ಬೆಳೆಗಾರರ ಬಿತ್ತನೆ ಬೇಡಿಕೆಯನ್ನು ಪೂರ್ಣವಾಗಿ ಪೂರೈಸಲಾಗಿದೆ.

ಈ ಅವಧಿಯಲ್ಲಿ ರಾಜ್ಯದಲ್ಲಿ ಸುಮಾರು ೩೬,೦೦೦ ಮೆ. ಟನ್ನುಗಳಷ್ಟು ರೇಷ್ಮೆ ಗೂಡುಗಳ ಉತ್ಪಾದನೆಯಾಗಿದೆ. ಕಳೆದ ಸಾಲಿನ ಇದೇ ಅವಧಿಯ ಉತ್ಪತ್ತಿಗೆ ಹೋಲಿಸಿದರೆ ಪ್ರಸಕ್ತ ಸಾಲಿನಲ್ಲಿ ಸುಮಾರು ೩೦೦೦ ಟನ್ನುಗಳಷ್ಟು ರೇಷ್ಮೆ ಗೂಡಿನ ಉತ್ಪಾದನೆ ಜಾಸ್ತಿಯಾಗಿದೆ. ಆದ್ದರಿಂದ ಶೇಕಡ ೨೫ ರಷ್ಟು ಬೆಲೆ ರೈತರಿಗೆ ಸಿಕ್ಕಿಲ್ಲವೆಂಬುದು ಸತ್ಯಕ್ಕೆ ದೂರವಾದುದು. ತೀವ್ರ ಬರ ಪರಿಸ್ಥಿತಿ, ಮತ್ತು ವಾತಾವರಣದ ವೈಪರೀತ್ಯಗಳಿದ್ದರೂ ಉತ್ಪಾದನೆ ಕಡಿಮೆಯಾಗುವುದಿಲ್ಲವೆಂಬ ಅಂಶ ಗಮನಾರ್ಹ.

೧೯೮೭ರ ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಅಧಿಕ ಪ್ರಮಾಣದಲ್ಲಿ ವಾತಾವರಣದ ಶೈತ್ಯಾಂಶವು ಹೆಚ್ಚಾಗಿ, ರೇಷ್ಮೆ ಹುಳುಗಳಿಗೆ ತಗುಲಿದ ಸಪ್ಪೆ ಮತ್ತು ಸಣ್ಣಕಟ್ಟು ರೋಗಗಳಿಂದ ರೇಷ್ಮೆ ಬೆಳೆಗಳು ನಷ್ಟವಾಗಿರುವುದು ಕಂಡು ಬಂದಿದೆ. ಇಲಾಖೆಯ ತಾಂತ್ರಿಕ ಅಧಿಕಾರಿಗಳು ಮತ್ತು ಸಂಶೋಧನಾ ಸಂಸ್ಥೆಗಳ ಪರಿಣಿತರು ಈ ವಿಷಯದ ಬಗ್ಗೆ ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಆಳವಾದ ಅಧ್ಯಯನ ನಡೆಸಿ ಅವರೂ ಕೂಡ ವಾತಾವರಣದ ಏರುಪೇರಿನಿಂದಾಗಿಯೇ ರೇಷ್ಮೆ ಬೆಳೆಗಳು ನಷ್ಟವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಈ ರೀತಿಯ ವಾತಾವರಣದ ವೈಪರೀತ್ಯಗಳಿಂದ ಉಂಟಾಗುವ ರೋಗಗಳನ್ನು ತಡೆಗಟ್ಟಲು ಅನೇಕ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದ್ದು ರೋಗ ನಿಯಂತ್ರಣ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಿದ ರೇಷ್ಮೆ ಬೆಳೆಗಾರರ ಬೆಳೆಗಳು ನಷ್ಟವಾಗದೆ ಇರುವುದು ಕಂಡುಬಂದಿದೆ.

ಮೈಸೂರು ಹಳೆ ಬಿತ್ತನೆ ಪ್ರದೇಶದಲ್ಲಿ ಬಿತ್ತನೆ ಗೂಡಿನ ಉತ್ಪಾದನೆ ಸಂಪೂರ್ಣವಾಗಿ ನಿಯಂತ್ರಣದಲ್ಲಿದೆ. ಬಿತ್ತನೆ ಪ್ರದೇಶದಿಂದ ಉತ್ತಮ ಗುಣ ಮಟ್ಟದ ಗೂಡುಗಳು ಸರಬರಾಜು ಆಗಿಲ್ಲವೆಂದೂ ಭ್ರಷ್ಟ ಅಧಿಕಾರಿಗಳು ಬಿತ್ತನೆ ಗೂಡುಗಳನ್ನು ತಯಾರಿಸುವುದರಲ್ಲಿ ಸರಿಯಾಗಿ ನಿಯಂತ್ರಣ ಮಾಡದೆ ಅನ್ಯಾಯ ಪರಿಸ್ಥಿತಿ ಆಗಿದೆಯೆಂದು ಹೇಳಿರುವುದು ಸತ್ಯಕ್ಕೆ ದೂರವಾದುದು. ಬರ ಪರಿಸ್ಥಿತಿ ಮತ್ತು ಅಧಿಕ ಬೆಲೆಯಿಂದಾಗಿ ವಾತಾವರಣದ ವೈಪರೀತ್ಯಗಳಿದ್ದರೂ ಮೈಸೂರು ಬಿತ್ತನೆ ಗೂಡುಗಳ ಉತ್ಪಾದನೆ ಜಾಸ್ತಿಯಾಗಿ ಕಾಲ ಕಾಲಕ್ಕೆ ರೇಷ್ಮೆ ಮೊಟ್ಟೆಗಳನ್ನು ತಯಾರಿಸಲು ಎಲ್ಲಾ ಸರ್ಕಾರಿ ಮತ್ತು ಖಾಸಗಿ ಬಿತ್ತನೆ ಕೋಠಿಗಳಿಗೆ ಬೇಕಾದ ರೋಗರಹಿತ ಬಿತ್ತನೆ ಗೂಡುಗಳನ್ನು ಸರಬರಾಜು ಮಾಡಲಾಗಿದೆ. ಬಿತ್ತನೆ ಮೊಟ್ಟೆಗಳಿಂದಲೇ ಬೆಳೆಗಳು ನಷ್ಟವಾಗಿದ್ದು ಪಕ್ಷದಲ್ಲಿ ಈ ಪ್ರಮಾಣದ ಗೂಡಿನ ಉತ್ಪಾದನೆ ಆಗುತ್ತಿರಲಿಲ್ಲ. ಇತ್ತೀಚೆಗೆ ರೇಷ್ಮೆ ಗೂಡಿನ ಬೆಲೆ ಹೆಚ್ಚಾಗಿರುವುದರಿಂದ ರೇಷ್ಮೆ ಬೆಳೆಗಾರರಿಗೆ ಒಳ್ಳೆಯ ಬೆಲೆ ಸಿಕ್ಕಿ ಅನುಕೂಲವಾಗಿರುವುದು ಸರ್ಕಾರಕ್ಕೆ ಬಂದಿದೆ.